CC 457/2024 PW4

ದಿನಾಂಕ 30.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಶ್ರೀ ಅರ್ ಎಸ್ ವಕೀಲರಿಂದಃ

5. ನನ್ನ ಮನೆ ತಕ್ಷೀರು ಸ್ಥಳದಿಂದ 500 ಮೀಟರ್ ದೂರದಲ್ಲಿ ಇದೆ. ನಾನು ಮನೆಯಿಂದ ಶಾಲೆಯವರೆಗೆ ವಾಕಿಂಗ್ ಮಾಡಲು ಹೋಗಿದ್ದೆ. ಮನೆಯಿಂದ ಶಾಲೆ ಆರ್ಧ ಕಿ ಮೀ ದೂರದಲ್ಲಿ ಇದೆ. ನಾನು ವಾಕಿಂಗ್ ಮಾಡಲು ಬೆಳಿಗ್ಗೆ 6.00 ಗಂಟೆಗೆ ಮನೆಯಿಂದ ಹೊರಟಿದ್ದೆ. ಶಾಲೆಗೆ ತಲುಪುವಾಗ ಬೆಳಿಗ್ಗೆ 6.10 ಗಂಟೆಯಾಗಿತ್ತು. ನನ್ನ ಜೊತೆಗೆ ಚಾಸಾ-3 ರವರು ಇದ್ದರು. ನಾನು ಹೋಗುವ ಮೊದಲು ಸ್ಥಳದಲ್ಲಿ ದನದ ಹತ್ತಿರ ಅಂದಾಜು 6-7 ಮಂದಿ ಇದ್ದರು. ನಾನು ಸ್ಥಳಕ್ಕೆ ಹೋದಾಗ ಘಟನೆಯ ಬಗ್ಗೆ ಗೊತ್ತಾಗಿರುತ್ತದೆ. ನಾನು ಚಾಸಾ-2 ರವರನ್ನು ಮಾತನಾಡಿಸಿ ವಿಚಾರವನ್ನು ತಿಳಿದುಕೊಂಡೆ.

6. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ಸ್ವತ್ತು ಸ್ವಾ ಧೀನತಾ ಮಹಜರನ್ನು ಮಾಡಿರುವುದಿಲ್ಲ. ನಾನು ಎಲ್ಲಾ ದಾಖಲೆಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸ್ಥಳ ಮಹಜರು ಮಾಡುವ ಸಮಯದಲ್ಲಿ ಸ್ಥಳದಲ್ಲಿ ಇರುವುದಿಲ್ಲ, ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದನ ಮರಣಹೊಂದಿದ ಕಾರಣ ಚಾಸಾ-1 ರವರಿಗೆ ಅದರ ವಿಮಾ ದೊರಕಬೇಕೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೆ ತಪ್ಪು ಆಗಿರುವುದಿಲ್ಲ, ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ
ಕಾರ್ಕಳ